**ದಿನಾಂಕಃ 28.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ: ಶ್ರೀ. ಡಿ.ಸಿ. ವಕೀಲರಿಂದಃ-**

ನನ್ನ ತಂದೆಗೆ ದಾವಾ ಐಟಂ.3 ರ ಸ್ವತ್ತು ವಾದಿಯ ತಂದೆಯಾದ ರಂಗಪ್ಪ ಮತ್ತು ನನ್ನ ತಂದೆ ಒಟ್ಟು ಕುಟುಂಬದಲ್ಲಿ ಇದ್ದಾಗ ದರ್ಖಾಸ್ ಮೂಲಕ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬಂದಲ್ಲಿ ಇದ್ದಾಗ ದಾವಾ ಐಟಂ.3 ರ ಸ್ವತ್ತು ನನ್ನ ತಂದೆಗೆ ಮಂಜೂರಾಗಿರುವ ವಿಚಾರ ನನಗೆ ತಿಳಿದಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದಾಗ ನಾನು ಅಪ್ರಾಪ್ತ ವಾಯಸ್ಕನಾಗಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 16 ವರ್ಷ ಮೇಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿ ಹೋದ ನಂತರ ವಾದಿಯ ತಂದೆ ರಂಗಪ್ಪನವರು ಕುಟುಂಬದ ಎಲ್ಲಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದಾಗ ನಾನು ಅಪ್ರಾಪ್ತ ವಯಸ್ಕನಾಗಿದ್ದರಿಂದ ಕುಟುಂಬದ ಯಾವುದೇ ವ್ಯವಹಾರವನ್ನು ಮಾಡುತ್ತಿರಲಿಲ್ಲ ಎಂದರೆ ಸರಿ.

ನನ್ನ ತಂದೆ ತೀರಿ ಹೋದ ನಂತರ ಒಟ್ಟು ಕುಟುಂಬದ ಆಸ್ತಿಯಿಂದಲೇ ನಮ್ಮ ಕುಟುಂಬ ಮತ್ತು ರಂಗಪ್ಪನವರ ಕುಟುಂಬದ ಜೀವನ ನಡೆಯುತ್ತಿತ್ತು ಎಂದರೆ ಸರಿ. ವಾದಿಯ ತಂದೆ ತನಗೆ ಯಾವುದೇ ಆಸ್ತಿಗಳು ಬೇಡವೆಂದು ದಿನಾಂಕ 13.02.1978 ರಂದು ವಾದಿಯ ತಂದೆಯಾದ ರಂಗಪ್ಪನವರು ಯಾವುದೇ ಹಕ್ಕು ಖುಲಾಸೆ ಪತ್ರವನ್ನು ನನಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1978 ನೇ ಸಾಲಿನಲ್ಲಿ ನನ್ನ ಸ್ವಯಾರ್ಜಿತ ಕೆಲಸ ಮತ್ತು ದುಡಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1978 ರ ಹಕ್ಕು ಖಲಾಸೆ ಪತ್ರದಲ್ಲಿ ನಮೂದಿಸಿರುವಂತೆ ವಾದಿಯ ತಂದೆ ರಂಗಪ್ಪನವರಿಗೆ ಹಣ ನೀಡಲು ನನಗೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸರಿಯಲ್ಲ.

ವಾದಿಯ ತಂದೆ ರಂಗಪ್ಪನವರಿಗೆ ಮೋಸದಿಂದ 1978 ರಲ್ಲಿ ಬೇರೆ ಯಾರಿಂದಲೋ ಹಕ್ಕು ಖುಲಾಸೆ ಪತ್ರವನ್ನು ಬರೆಸಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1978 ರಲ್ಲಿ

ಹಕ್ಕು ಖುಲಾಸೆ ಪತ್ರವನ್ನು ಸೃಷ್ಠಿಸಿಕೊಂಡ ನಂತರ ದಾವಾ ಆಸ್ತಿ ಖಾತೆಗಳನ್ನು ನನ್ನ ಹೆಸರಿಗೆ ಬದಲಾಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಸಲುವಾಗಿ 1995 ನೇ ಸಾಲಿನಲ್ಲಿ ನಾನು ಸೃಷ್ಠಿಸಿಕೊಂಡಿದ್ದ ಹಕ್ಕು ಖುಲಾಸೆ ಪತ್ರದ ಆಧಾರದ ಮೇಲೆ ದಾವಾ ಆಸ್ತಿಗಳನ್ನು ಖಾತೆ ಮಾಡಿಕೊಂಡ ಬಗ್ಗೆ ವಾದಿಯ ತಂದೆ ರಂಗಪ್ಪನವರು ನನ್ನೊಂದಿಗೆ ಜಗಳ ಮಾಡಿದ್ದು, ಊರಿನಲ್ಲಿ ಪಂಚಾಯಿತಿಯನ್ನು ಸಹ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚಾಯಿತಿಯಲ್ಲಿ ನಾನು ತಪ್ಪು ಒಪ್ಪಿಕೊಂಡು ನನ್ನ ಚಿಕ್ಕಪ್ಪನವರಾದ ರಂಗಪ್ಪನವರ ಆಸ್ತಿಯನ್ನು ಅವರಿಗೆ ಬಿಟ್ಟುಕೊಡಲು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರಗಳೆಲ್ಲವೂ ನಮ್ಮ ಊರಿನ ದೇವಸ್ಥಾನದಲ್ಲಿ ಪಂಚಾಯಿತಿ ನಡೆದಿದ್ದರೂ ಸಹ ವಾದಿಗೆ ದಾವಾ ಆಸ್ತಿಗಳಲ್ಲಿ ವಿಭಾಗ ಕೊಡಬೇಕೆಂದು ಈ ದಾವೆಯಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರಗಳೆಲ್ಲವು ನ್ಯಾಯಾಲಯಕ್ಕೆ ತಿಳಿಯುತ್ತದೆ ಎಂದು ಸದರಿ ಮೂಲ ಹಕ್ಕು ಖುಲಾಸೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯ ತಂದೆ ರಂಗಪ್ಪನವರಿಗೆ ಕರಿಯಮ್ಮ ಎಂಬುವವರು ಹೆಂಡತಿಯಾಗಿರುತ್ತಾರೆ ಎಂದರೆ ಸರಿ. ರಂಗಪ್ಪ ಮತ್ತು ಕರಿಯಮ್ಮರವರ ಮಗಳೇ ವಾದಿಯಾಗಿರುತ್ತಾರೆ ಎಂದರೆ ಸರಿ. ರಂಗಪ್ಪನವರು ಅವರ ಜೀವಿತ ಅವಧಿಯಲ್ಲಿ ಕರಿಯಮ್ಮನವರನ್ನು ಬಿಟ್ಟು ಬೇರೆ ಯಾರನ್ನು ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. ವಿಚಾರಗಳು ಹೀಗಿದ್ದರೂ ಸಹ ನನ್ನ ಪ್ರತಿವಾದ ಪತ್ರ ಪ್ಯಾರ ನಂ.11ರಲ್ಲಿ ಸುಳ್ಳು ಅಂಶಗಳನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ವಿಭಾಗ ಕೊಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ಸುಳ್ಳು ಅಂಶಗಳಿಂದ ಕೂಡಿದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದ ಪ್ಯಾರ ನಂ.11ರಲ್ಲಿ ವಾದಿಯ ತಂದೆ ರಂಗಪ್ಪನವರು ಗಂಗಮ್ಮ ಎಂಬುವವರನ್ನು ಎರಡನೇ ಮದುವೆಯಾಗಿರುತ್ತಾರೆ ಎಂದು ಅವರಿಗೆ ಯಶೋಧಮ್ಮ ಎಂಬ ಮಗಳು ಇರುತ್ತಾಳೆ ಎಂಬುದು ಶುದ್ಧ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ನಾನು ಸೃಷ್ಠಿಸಿಕೊಂಡಿರುವ ನಿಡಿ.1ರ ಹಕ್ಕು ಖುಲಾಸೆ ಪತ್ರದ ಆಧಾರದ ಮೇಲೆ ನಾನು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಸದರಿ ಅಂಶಗಳು ಎಲ್ಲವು ಸುಳ್ಳಿನಿಂದ ಕೂಡಿರುತ್ತದೆ

ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ಕಾನೂನಾತ್ಮಕ ಹಿಸ್ಸೆಯ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2 ನೇ ಪ್ರತಿವಾದಿ ಪರ ವಕೀಲರು ಮರುವಿಚಾರಣೆ ಇರುತ್ತದೆ ಎಂದು ತಿಳಿಸಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.

**ಮರುವಿಚಾರಣೆಃ 1 ಮತ್ತು 4 ನೇ ಪ್ರತಿವಾದಿ ಪರ: ಶ್ರೀ. ಬಿ.ಆರ್. ವಕೀಲರಿಂದಃ–**

ನಿಡಿ.1ರ ಹಕ್ಕು ಖುಲಾಸೆ ಪತ್ರವನ್ನು ಸಖರಾಯಪಟ್ಟಣದ ನಾರಾಯಣಸ್ವಾಮಿರವರು ಬರೆದು ಬಿಕ್ಲಮ್‌ದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ಹಕ್ಕು ಖುಲಾಸೆ ಪತ್ರಕ್ಕೆ ಬಾಸೂರು ಗ್ರಾಮದ ವಾಸಿಯಾದ ಚಂದ್ರಾಧರಪ್ಪ ಮತ್ತು ಕಬ್ಬಳಿ ಗ್ರಾಮದ ವಾಸಿಯಾದ ಮಹಲಿಂಗಪ್ಪರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ನಾರಾಯಣಸ್ವಾಮಿ, ಚಂದ್ರಾಧರಪ್ಪ ಮತ್ತು ಮಹಲಿಂಗಪ್ಪರವರು ಈಗ ಮರಣ ಹೊಂದಿರುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ: ಶ್ರೀ. ಡಿ.ಸಿ. ವಕೀಲರಿಂದಃ–**

ನಿಡಿ.1ರ ಹಕ್ಕು ಖುಲಾಸೆ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಹಕ್ಕು ಖುಲಾಸೆ ಮಾಡಿಕೊಟ್ಟ ದಿನದಂದು ನಾನು ಉಪ–ನೊಂದಣಾಧಿಕಾರಿ ಕಛೇರಿಗೆ ನಾನು ಹೋಗಿರುತ್ತೇನೆ. ಸದರಿ ದಿನದಂದು ನಾನು, ನಾರಾಯಣಸ್ವಾಮಿ, ಚಂದ್ರಾಧರಪ್ಪ ಮತ್ತು ಮಹಲಿಂಗಪ್ಪರವರು ನಿಡಿ.1ರ ಹಕ್ಕು ಖುಲಾಸೆ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ

ಸರಿಯಲ್ಲ. ದಿನಾಂಕ 14.02.1978 ರಂದು ವಾದಿಯ ತಂದೆಯಾದ ರಂಗಪ್ಪನವರು ಉಪ-ನೊಂದಣಾಧಿಕಾರಿ ಕಛೇರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ರಂಗಪ್ಪನವರು ಉಪ-ನೊಂದಣಾಧಿಕಾರಿ ಕಛೇರಿಗೆ ಬಂದು ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿಲ್ಲದಿದ್ದರೂ ಸಹ ವಾದಿಯ ಹಿಸ್ಸೆಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1(ಎ) ಪ್ರತಿವಾದಿ ಪರ: ಶ್ರೀ. ಕೆ.ಜಿ.ಪಿ. ವಕೀಲರಿಂದಃ-**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ವಾದಿಯ ತಂದೆಯೂ ಸಹ ಅನಕ್ಷರಸ್ಥರಾಗಿದ್ದರು. ನನಗೆ ವ್ಯವಸಾಯವನ್ನು ಬಿಟ್ಟು ಬೇರೆ ಯಾವುದೇ ಆದಾಯದ ಮೂಲಕ ಇರುವುದಿಲ್ಲ ಎಂದರೆ ಸರಿ. 1978 ರಲ್ಲಿ ನನಗೆ ಸುಮಾರು 18 ವರ್ಷ ವಯಸ್ಸಾಗಿತ್ತು. ನಿಡಿ.1 ರ ಹಕ್ಕು ಖುಲಾಸೆ ಪತ್ರ ಬರೆಸಿಕೊಳ್ಳಲು ನಾನು ನೀಡಿದಂತಹ ಹಣವು ನಾನು ಕಬ್ಬಳಿ ಮಹಲಿಂಗಪ್ಪನವರ ಮನೆಯಲ್ಲಿ ಜೀತಕ್ಕೆಂದು ಇದ್ದು, ಅದರಿಂದ ಬಂದಂತಹ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ.1 ರ ಹಕ್ಕು ಖುಲಾಸೆ ಪತ್ರವನ್ನು ಬರೆದವರು ನಾರಾಯಣಸ್ವಾಮಿಯಾಗಿರುತ್ತಾರೆ.

ಮಧ್ವರಮಣಚಾರ್ ರವರು ಪತ್ರ ಬರಹಗಾರರಾಗಿ ಕಡೂರಿನಲ್ಲಿ ಇದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಡಿ.1 ರ ಹಕ್ಕು ಖುಲಾಸೆ ಪತ್ರವನ್ನು ನಾರಾಯಣಸ್ವಾಮಿರವರೇ ಬರೆದಿದ್ದು ಎಂದು ತೋರಿಸಲು ನಾನು ಇತರೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಮಧ್ವರಮಣಚಾರ್ ರವರಿಂದ ಯಾವುದೇ ದಾಖಲಾತಿಗಳನ್ನು ಬರೆಸಿರುವುದಿಲ್ಲ ಎಂದರೆ ಸರಿ. ನಿಡಿ.1 ರ ಹಕ್ಕು ಖುಲಾಸೆ ಪತ್ರದ ಮೂಲ ದಾಖಲಾತಿ ಈ ಮೊದಲು ಬೇರೊಂದು ಕೇಸಿಗೆಂದು ಬಸ್ಸಿನಲ್ಲಿ ತೆಗೆದುಕೊಂಡು ಹೋಗುತ್ತಿರುವಾಗ ಬಸ್ಸಿನಲ್ಲಿ ಕಳೆದು ಹೋಗಿರುತ್ತದೆ ಎಂದು ನುಡಿಯುತ್ತಾರೆ.

ನಿಡಿ.1 ರ ಹಕ್ಕು ಖುಲಾಸೆ ಪತ್ರಕ್ಕೆ ವಾದಿಯ ತಂದೆ ರಂಗಪ್ಪರವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದರೆ, ಸಾಕ್ಷಿಯು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ.1 ರ ದಾಖಲೆಗೆ ರಂಗಪ್ಪನವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದು ಬರವಣಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿಡಿ.1 ರ ಹಕ್ಕು ಖುಲಾಸೆ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಹಾಕಿದವರು ನನ್ನ ಸಂಬಂಧಿಕರಲ್ಲ. ಸಾಕ್ಷಿಗಾಗಿ ಸಹಿ ಹಾಕಿದ

ಚಂದ್ರಾಧರಪ್ಪರವರು ಸಹ ಪತ್ರಬರಹಗಾರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಡಿ.1ರ ಮೂಲ ದಾಖಲೆಯು ನನ್ನ ಬಳಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ರಂಗಪ್ಪನವರ ಹೆಬ್ಬೆಟ್ಟಿನ ಗುರುತು ಗೊತ್ತಾಗುತ್ತದೆ ಎಂದು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ.1ರ ಹಕ್ಕು ಖುಲಾಸೆ ಪತ್ರವನ್ನು ಬರವಣಿಗೆ ಮಾಡುವಾಗ ನಾನು ಮಹಲಿಂಗಪ್ಪರವರ ಮನೆಯಲ್ಲಿ ಜೀತಕ್ಕೆ ಇದ್ದು ಕೆಲಸ ಮಾಡಿ ಅದರಿಂದ ಬಂದ ಹಣವನ್ನು ರಂಗಪ್ಪನವರಿಗೆ ನೀಡಿದ್ದೇನೆ ಎಂಬ ಬಗ್ಗೆ ಬರವಣಿಗೆ ಆಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಪತ್ರಬರಹಗಾರರಿಗೆ ನಾನು ಸದರಿ ವಿಚಾರವನ್ನು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.1ರ ದಾಖಲೆಯಲ್ಲಿ ನಾನು ರಂಗಪ್ಪನವರಿಗೆ ರೂ.1,000/- ಹಣವನ್ನು ನೀಡಿದ ಬಗ್ಗೆ ಅದು ಎಲ್ಲಿಂದ ಬಂತು ಎಂದು ನಮೂದಿಸಲಾಗಿರುತ್ತದೆ ಎಂದು ನಾನು ಪತ್ರವನ್ನು ಓದಿ ತಿಳಿದುಕೊಂಡಿರುವುದಿಲ್ಲ. ನಿಡಿ.1ರ ಹಕ್ಕು ಖುಲಾಸೆ ಪತ್ರವನ್ನು ರಂಗಪ್ಪನವರು ಎಂದಿಗೂ ಬರೆದುಕೊಟ್ಟಿರುವುದಿಲ್ಲ, ಬೇರೆ ಯಾರನ್ನೋ ಕರೆದುಕೊಂಡು ಹೋಗಿ ನಿಡಿ.1ರ ದಾಖಲೆಯನ್ನು ಸೃಷ್ಟಿಸಿಕೊಂಡು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1978ರಲ್ಲಿ ರಂಗಪ್ಪನವರೇ ಹಿರಿಯ ಸದಸ್ಯನಾಗಿರುವುದರಿಂದ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದು ಸದರಿ ಸಮಯದಲ್ಲಿ ನಾನು ಅಪ್ರಾಪ್ತ ವಯಸ್ಕನಾಗಿದ್ದೆ ಎಂದರೆ ಸರಿಯಲ್ಲ. ರಂಗಪ್ಪನವರು ಅವಿದ್ಯಾವಂತರಾಗಿದ್ದರಿಂದ ಅದನ್ನು ದುರುಪಯೋಗಪಡಿಸಿಕೊಂಡು ನಾನು ಮತ್ತು ಪತ್ರಬರಹಗಾರರು ಮತ್ತು ಸಾಕ್ಷಿದಾರರು ಹಕ್ಕು ಖುಲಾಸೆ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪತ್ರಬರಹಗಾರರು ಮತ್ತು ಸಾಕ್ಷಿದಾರರು ಮರಣ ಹೊಂದಿರುವ ಕುರಿತು ಅವರ ಮರಣ ಪ್ರಮಾಣಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ದಾವಾ ಐಟಂ.3ರ ಆಸ್ತಿಯು ರಂಗಪ್ಪ ಮತ್ತು ನಾವು ಒಟ್ಟು ಕುಟುಂಬದಲ್ಲಿ ಇದ್ದಾಗಲೇ ದರ್ಖಾಸ್ ಮೂಲಕ ಒಟ್ಟು ಕುಟುಂಬಕ್ಕೆ ಮಂಜೂರು ಮಾಡಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ.3 ನಮ್ಮ ಕುಟುಂಬಕ್ಕೆ ಮಂಜೂರಾದಾಗ ನಾನು ಅಪ್ರಾಪ್ತ ವಯಸ್ಕನಾಗಿದ್ದೆ ಎಂದರೆ, ಸಾಕ್ಷಿಯು ಅಪ್ರಾಪ್ತ ವಯಸ್ಕರು ಎಂದರೆ ಏನು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ನನಗೆ

ಸದರಿ ಸಮಯದಲ್ಲಿ ಸುಮಾರು 18 ರಿಂದ 19 ವರ್ಷ ವಯಸ್ಸಾಗಿರುತ್ತದೆ ಎಂದು ನುಡಿಯುತ್ತಾರೆ

ತಿಮ್ಮಜ್ಜನಿಗೆ ರಂಗಪ್ಪ ಮತ್ತು ಗೋವಿಂದಪ್ಪ ಎಂಬ ಇಬ್ಬರು ಗಂಡು ಮಕ್ಕಳು ಇದ್ದರು. ಹೆಣ್ಣು ಮಕ್ಕಳು ಎಷ್ಟು ಜನ ಎಂಬ ಪ್ರಶ್ನೆಗೆ ಸಾಕ್ಷಿಯು ಯಾರು ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಕರಾರಿನಲ್ಲಿ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ತಿಮ್ಮಜ್ಜನಿಗೆ ಹೆಣ್ಣು ಮಕ್ಕಳು ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರೆಗು ನಮ್ಮ ಕುಟುಂಬದಲ್ಲಿ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. 1978 ರಲ್ಲಿ ನನ್ನ ಚಿಕ್ಕಪ್ಪ ರಂಗಪ್ಪರವರು ಹಕ್ಕು ಖುಲಾಸೆ ಪತ್ರದ ಮೂಲಕ ವಿಭಾಗ ಮಾಡಿಕೊಟ್ಟಿರುತ್ತಾರೆ. ವಿಭಾಗಕ್ಕೆ ಸಂಬಂಧಿಸಿದಂತೆ ಬೇರೆ ಯಾವುದೇ ಪತ್ರ ಬರವಣಿಗೆ ಆಗಿರುವುದಿಲ್ಲ. ನಿಡಿ.1 ರ ಹಕ್ಕು ಖುಲಾಸೆ ಪತ್ರಕ್ಕೆ ನನ್ನ ಅತ್ತೆಯಂದಿರು ಸಹಿ ಮಾಡಿರುವುದಿಲ್ಲ.

ಅಸಲು ದಾವಾ ಸಂಖ್ಯೆ-107/1995 ರ ದಾವೆಯನ್ನು ನಾನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ರಂಗಪ್ಪನವರು ಪ್ರತಿವಾದ ಪತ್ರವನ್ನು ಸಲ್ಲಿಸಿ ನಾನು ಯಾವುದೇ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ಇರುವ ಸಹಿಯು ರಂಗಪ್ಪನವರದ್ದು ಎಂದು ತೋರಿಸಿ ಕೇಳಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಸದರಿ ಸಹಿಯು ರಂಗಪ್ಪನವರದ್ದು ಎಂದು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಡಿ.26 ಎಂದು ಗುರುತಿಸಲಾಯಿತು.

ರಂಗಪ್ಪನವರು ತಕರಾರು ಸಲ್ಲಿಸಿದ ನಂತರ ಊರಿನಲ್ಲಿ ಪಂಚಾಯಿತಿ ನಡೆದು ನಾನು ಸದರಿ ಪಂಚಾಯಿತಿಯಲ್ಲಿ ತಪ್ಪಾಯಿತು ಎಂದು ರಂಗಪ್ಪನವರ ಆಸ್ತಿಯನ್ನು ಬಿಟ್ಟುಕೊಡುತ್ತೇನೆ ಎಂದು ಒಪ್ಪಿಕೊಂಡು ತದನಂತರ ರಂಗಪ್ಪನವರಿಗೆ ಅವರ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಸ್ತುತ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿ ಮತ್ತು ರಂಗಪ್ಪನವರು ಒಟ್ಟಿಗೆ ಇದ್ದು, ಅವರ ಸ್ವಾಧೀನಕ್ಕೆ ನಾನು ತಂಟೆ-ತಕರಾರು ಮಾಡಿದ್ದರಿಂದಲೇ ರಂಗಪ್ಪನವರು ವಾದಿಗೆ ಹೇಳಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದಾಗಿನಿಂದಲೂ ಸಹ ವಾದಿಗೆ ಮತ್ತು ದಾವಾ

ಆಸ್ತಿಗಳಿಗೆ ತೊಂದರೆ ನೀಡುತ್ತಲೇ ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1978 ರಿಂದಲೂ ದಾವಾ ಆಸ್ತಿಗಳಲ್ಲಿ ನಾನೇ ಸ್ವಾಧೀನದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. 1978 ರಲ್ಲಿ ನಾನು ಮತ್ತು ರಂಗಪ್ಪನವರು ಒಟ್ಟು ಕುಟುಂಬದಲ್ಲಿ ಸ್ವಾಧೀನದಲ್ಲಿ ಇದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ರಂಗಪ್ಪನವರಿಗು ಸಹ ಹಿಸ್ಸೆಯ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ರಂಗಪ್ಪನವರು ಈಗ ಮೃತಪಟ್ಟಿರುವುದರಿಂದ ದಾವಾ ಆಸ್ತಿಗಳಲ್ಲಿ ರಂಗಪ್ಪನವರ ಹೆಂಡತಿ-ಮಕ್ಕಳಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ರಂಗಪ್ಪನವರಿಗೆ ಸೇರಿದ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.